DITTO WS

Reg. No. : ....................................

Name : ........................................

**FY-06**

# FIRST YEAR HIGHER SECONDARY EXAMINATION, MARCH 2020

Part – II

**KANNADA**

Maximum : 80 Scores

Time : **2 ½** Hours

Cool-off time : 15 Minutes

***General Instructions to Candidates :***

- There is a 'Cool-off time' of 15 minutes in addition to the writing time.
- Use the 'Cool-off time' to get familiar with questions and to plan your answers.
- Read questions carefully before answering.
- Read the instructions carefully.

**ವಿದ್ಯಾರ್ಥಿಗಳಿಗೆ ಸೂಚನೆಗಳು :**

- ಪರೀಕ್ಷೆ ಬರೆಯಲು ಬೇಕಾದ ಸಮಯಕ್ಕೆ ಹೊರತಾಗಿ **15** ನಿಮಿಷಗಳ 'ಕೂಲ್ ಆಫ್ ಸಮಯ' ವನ್ನು ನೀಡಲಾಗಿದೆ.
- 'ಕೂಲ್ ಆಫ್ ಸಮಯ' ವನ್ನು ಪ್ರಶ್ನೆಗಳಿಗೆ ಸಂಬಂಧಿಸಿದ ನಿಮ್ಮ ಉತ್ತರಗಳನ್ನು ಸಿದ್ಧಪಡಿಸಲು ಬಳಸಿ.
- ಉತ್ತರಗಳನ್ನು ಬರೆಯುವುದಕ್ಕೆ ಮುಂಚಿತವಾಗಿ ಪ್ರಶ್ನೆಗಳನ್ನು ಗಮನವಿಟ್ಟು ಓದಿರಿ.
- ಕೊಟ್ಟಿರುವ ಸೂಚನೆಗಳನ್ನು ಗಮನವಿಟ್ಟು ಓದಿರಿ.

**(1 ರಿಂದ 4 ರ ವರೆಗಿನ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಆವರಣದಿಂದ ಆರಿಸಿ ಬರೆಯಿರಿ)** **(4 × 1 = 4)**

1. 'ಮೂಢನಂಬಿಕೆಗಳ ಬೀಡಿನಲ್ಲಿ' ಪಾಠವನ್ನು ಯಾವ ಕೃತಿಯಿಂದ ಆಯ್ದುಕೊಳ್ಳಲಾಗಿದೆ ?
   (ವಿನೋದ, ಮುಗುಳು, ನಕ್ಕು ಹಸುರಾಗಿ, ದಜ್ಜಾಲ)

2. 'ಅಂಡಮಾನ್ ಕನಸು' ಪ್ರವಾಸ ಕಥನವನ್ನು ಬರೆದವರು ಯಾರು ?
   (ಡಾ. ಅಮೃತ ಸೋಮೇಶ್ವರ, ದ.ರಾ. ಬೇಂದ್ರೆ, ಕುವೆಂಪು, ರಹಮತ್ ತರೀಕೆರೆ)

3. ಬಸವಣ್ಣನವರ ವಚನಗಳ ಅಂಕಿತ ಯಾವುದು ?
   (ಕೂಡಲ ಸಂಗಮದೇವ, ಅಮರೇಶ್ವರ ಲಿಂಗ, ಗುಹೇಶ್ವರ, ಚೆನ್ನಮಲ್ಲಿಕಾರ್ಜುನ)

4. 'ಕವಿ ಚಕ್ರವರ್ತಿ' ಬಿರುದಿಗೆ ಪಾತ್ರನಾದ ಕವಿ ಯಾರು ?
   (ದುರ್ಗಸಿಂಹ, ಕುಮಾರವ್ಯಾಸ, ಜನ್ನ, ಬಸವಣ್ಣ)

**(5 ರಿಂದ 8 ರ ವರೆಗಿನ ಪ್ರಶ್ನೆಗಳಿಗೆ ಸೂಚನೆಯಂತೆ ಉತ್ತರಿಸಿರಿ)** **(4 × 1 = 4)**

5. ಅನೃತ, ಸೂನು – ಈ ಪದಗಳ ಅರ್ಥವನ್ನು ಬರೆಯಿರಿ.

6. ಶೃಂಗಾರ, ವಿನೋದ – ಈ ಪದಗಳ ತದ್ಭವ ರೂಪವನ್ನು ಬರೆಯಿರಿ.

7. ಸಕ್ಕರೆಯಾಗು – ಈ ಪದವನ್ನು ವಿಂಗಡಿಸಿ ಸಂಧಿಯನ್ನು ಹೆಸರಿಸಿರಿ.

8. ಸೂರ್ಯ – ಈ ಪದದ ಎರಡು ಪರ್ಯಾಯ ಪದಗಳನ್ನು ಬರೆಯಿರಿ.

9. 'ಎಂಜಲಿಗೆ ಕೈಯೊಡ್ಡು' – ಈ ನುಡಿಗಟ್ಟನ್ನು ಉಪಯೋಗಿಸಿ ವಾಕ್ಯವೊಂದನ್ನು ರಚಿಸಿರಿ. **(2)**

10. ಕೆಳಗೆ ಕೊಟ್ಟಿರುವ ಮದರ್ ತೆರೇಸಾರವರ ಜೀವನ ಚರಿತ್ರೆಯ ಭಾಗವನ್ನು ಆತ್ಮಕಥೆಯಾಗಿ ಪರಿವರ್ತಿಸಿ ಬರೆಯಿರಿ. **(3)**

ಸೈಂಟ್ ಮೇರೀಸ್ ಶಾಲೆಯ ಸಿರಿವಂತ ಕುಟುಂಬಗಳಿಗೆ ಸೇರಿದ ವಿದ್ಯಾರ್ಥಿನಿಯರ ಸಹವಾಸವೇ ಸೋದರಿ ತೆರೇಸಾರಿಗೆ ದಿನದ ಹೆಚ್ಚಿನ ಸಮಯವೂ ದೊರಕುತ್ತಿತ್ತು. ಆದರೂ ತನ್ನ ಕೋಣೆಗೆ ಬಂದಾಗ ಕಿಟಕಿ ಮೂಲಕ ತೆರೇಸಾ ಕಾಣುತ್ತಿದ್ದುದು ಮೋತಿಜೀಲಿನ ಕೊಳಚೆ ಪ್ರದೇಶ ; ಕಲ್ಕತ್ತಾದ ಕೊಂಪೆಯೊಂದರ ಭೀಕರ ದೃಶ್ಯ ! ಇದರಿಂದ ಆಕೆಯ ಮನಸ್ಸೆಲ್ಲವೂ ಅಸ್ತವ್ಯಸ್ತ. ಈ ಅಶಾಂತಿಯ ಪರಿಹಾರಕ್ಕೆ ಧ್ಯಾನ, ಪ್ರಾರ್ಥನೆಯ ವೇಳೆ ಸದುತ್ತರ ಪಡೆಯುವ ಪ್ರಯತ್ನ ತೆರೇಸಾರದಾಗಿತ್ತು.

11. 'ಕಾನೂನು ಮಾಡೋದು ಜನಗಳನ್ನು ಕೊಲ್ಲೋಕಲ್ಲ, ಬದುಕಿಸೋಕೆ' – ಬಕ ನಾಟಕದಲ್ಲಿ ಬರುವ ಈ ಮಾತಿನ ಸಂದರ್ಭವನ್ನು ವಿವರಿಸಿರಿ. **(3)**

12. ಕೆಳಗೆ ಕೊಟ್ಟಿರುವ ಜನಪದ ತ್ರಿಪದಿಯ ಆಶಯವನ್ನು ಬರೆಯಿರಿ. **(3)**

ಹಣ್ಣು ಹಾಲಿಗಿಂತ ಬೆಣ್ಣೆ ತುಪ್ಪಕ್ಕಿಂತ
ಚೆನ್ನಾಗಿ ಕಳಿತ ರಸಬಾಳೆ – ಹಣ್ಣಿಂತ
ಚೆನ್ನ ಕಾಣೆ ತಾಯಿ ಎದೆಹಾಲು.

13. ಕೆಳಗೆ "ಅ" ವಿಭಾಗದಲ್ಲಿ ಕೊಟ್ಟಿರುವ ಕವನದ ಹೆಸರುಗಳನ್ನು "ಆ" ವಿಭಾಗದಲ್ಲಿ ಕೊಟ್ಟಿರುವ ಕವನದ ಸಾಲುಗಳೊಂದಿಗೆ ಸರಿ ಹೊಂದಿಸಿ ಬರೆಯಿರಿ. **(4)**

| "ಅ" | "ಆ" |
|---|---|
| ಸುನಾಮಿಯ ಹಾಡು | ಹೊಸತು ಜೀವ ಕಳೆಯ ಬೀರಿ |
| ಬ್ಲೆನ್ ಹೀಮ್ ಕದನ | ನಿನ್ನನುಭವವೆ ನಿನಗೆ ಧರುಮದ ದೀಪ |
| ಸುಗ್ಗಿ ಬರುತಿದೆ | ಅಣುಯುಗದಿಂದ ಶಿಲಾಯುಗಕ್ಕೆ |
| ಮಂಕುತಿಮ್ಮನ ಕಗ್ಗ | ಲೋಕ ಪ್ರಸಿದ್ಧಿಯ ಜಯವೆಂಬರೆಂದ |

DITTO WS

**(14 ರಿಂದ 18ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ 4 (ನಾಲ್ಕು) ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ. (4 × 4 = 16)**

14. ಅರಮನೆಯ ಹೊರಗಿನ ಅಂಗಳದಲ್ಲಿ ಪಹರೆಯವನು ಗಸ್ತು ತಿರುಗುತ್ತಿದ್ದ ಘಟನೆಯ ಸ್ವಾರಸ್ಯಕರ ಸನ್ನಿವೇಶವನ್ನು 'ಮೂಢನಂಬಿಕೆಗಳ ಬೀಡಿನಲ್ಲಿ' ಪಾಠಭಾಗದ ಆಧಾರದಲ್ಲಿ ಬರೆಯಿರಿ.

15. ಇಬ್ಬರು ಕವಿಗಳು ಬರೆದ ಕವನಗಳ ಸಾಲುಗಳನ್ನು ಕೆಳಗೆ ಕೊಡಲಾಗಿದೆ. ಇವುಗಳಲ್ಲಿ ಪ್ರಕಟವಾಗಿರುವ ಬೆಳಗಿನ ಸೌಂದರ್ಯವನ್ನು ಹೋಲಿಸಿ ಬರೆಯಿರಿ.

ಮೂಡಲ ಮನೆಯಾ ಮುತ್ತಿನ ನೀರಿನ
ಎರಕಽವಾ ಹೊಯ್ದಾ
ನುಣ್ಣ – ನೆರಕವಾ ಹೊಯ್ದ
ಬಾಗಿಲ ತೆರೆದೂ ಬೆಳಕೂ ಹರಿದೂ
ಜಗವೆಲ್ಲಾ ತೊಯ್ದಾ
ಹೋಯ್ತೋ – ಜಗವೆಲ್ಲಾ ತೊಯ್ದಾ

(ಬೆಳಗು ಕವನ – ದ.ರಾ. ಬೇಂದ್ರೆ)

ನೋಡಿ ಮೂಡಣದಾದಿಗಂತದಿ ಮೂಡುವೆಣ್ಣಿನ ಮೈಸಿರಿ
ರಂಜಿಸುತ್ತಿದೆ ಚೆಲುವೆಯಾಕೆಗೆ ಸುಪ್ರಭಾತವ ಬಯಸಿರಿ

(ದೋಣಿಹಾಡು ಕವನ – ಕುವೆಂಪು)

16. 'ಭೂತಾರಾಧನೆ ಒಂದು ಸಾಮೂಹಿಕ ಪಾಲ್ಗೊಳ್ಳುವಿಕೆಯ ಆರಾಧನೆಯಾಗಿದೆ' ಎಂಬುದನ್ನು ಪಾಠದ ಆಧಾರದಲ್ಲಿ ವಿವರಿಸಿರಿ.

17. ಕೆಳಗೆ ಕೊಟ್ಟಿರುವ 'ಮಂಕುತಿಮ್ಮನ ಕಗ್ಗ'ದ ಸಾಲುಗಳ ಸ್ವಾರಸ್ಯವನ್ನು ಬರೆಯಿರಿ.

(ಅ) ಉಪ್ಪಿಷ್ಟು ಹುಳಿಯಿಷ್ಟು ಕಾರ ಸಿಹಿಯಷ್ಟಿಷ್ಟು |
ಒಪ್ಪಿರ್ದೊಡದು ಭೋಜ್ಯವಂತು ಜೀವಿತಮುಂ ||

(ಆ) ಹುಲ್ಲಾಗು ಬೆಟ್ಟದಡಿ, ಮನೆಗೆ ಮಲ್ಲಿಗೆಯಾಗು |
ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೆ ||

18. 'ಶರಣರ ಕಾಯಕ ತತ್ವದಲ್ಲಿ ಆಸೆಗೆ ಸ್ಥಾನವಿಲ್ಲ' – ಈ ಆಶಯವನ್ನು ಆಯ್ದಕ್ಕಿ ಲಕ್ಕಮ್ಮ ಹೇಗೆ ಪ್ರತಿಪಾದಿಸಿದ್ದಾಳೆ ? ವಿವರಿಸಿರಿ.

**(19 ರಿಂದ 25 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ 5 (ಐದು) ಪ್ರಶ್ನೆಗಳಿಗೆ ಒಂದು ಪುಟಕ್ಕೆ ಮೀರದಂತೆ ಉತ್ತರಿಸಿರಿ) (5 × 5 = 25)**

19. ದುಂಬಿ, ಪಶು ಮತ್ತು ಪಕ್ಷಿ ಸಂಕುಲಗಳಿಗೆ ಸುಗ್ಗಿಯ ಆಗಮನದಿಂದುಂಟಾದ ಸಂಭ್ರಮವು 'ಸುಗ್ಗಿ ಬರುತಿದೆ' ಕವನದಲ್ಲಿ ವರ್ಣಿತವಾದ ಬಗೆಯನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

DITTO WS

20. ‘ಪ್ರಕೃತಿಯ ಮೇಲೆ ಮಾನವನ ಅತಿರೇಕ ಹಾಗೂ ಅವಿವೇಕತನದ ದಬ್ಬಾಳಿಕೆಯೇ ಪ್ರಕೃತಿ ವಿಕೋಪಗಳ ಪ್ರಧಾನ ಕಾರಣಗಳಲ್ಲಿ ಒಂದಾಗಿದೆ’ – ಈ ಮಾತನ್ನು ನೀವು ಒಪ್ಪುತ್ತೀರಾ ? ನಿಮ್ಮ ಅನಿಸಿಕೆಗಳನ್ನೊಳಗೊಂಡ ಲೇಖನವೊಂದನ್ನು ತಯಾರಿಸಿರಿ.

21. ‘ಒಸರು’ ಕಥೆಯಲ್ಲಿ ಬರುವ ಖಾದ್ರಿಕಾಕನ ಪಾತ್ರವು ನಾವು ಜೀವನದಲ್ಲಿ ಅಳವಡಿಸಿಕೊಳ್ಳಬೇಕಾದ ನಿಸ್ವಾರ್ಥ ಮನೋಭಾವಕ್ಕೆ ಉತ್ತಮ ಉದಾಹರಣೆಯಾಗಿದೆ – ಈ ಕುರಿತು ನಿಮ್ಮ ಅಭಿಪ್ರಾಯವನ್ನು ಪಾಠದ ಆಧಾರದಲ್ಲಿ ಸಮರ್ಥಿಸಿರಿ.

22. ‘ಹುಗ್ಗಿ’ ಕಥೆಯಲ್ಲಿ ಮೂಡಿ ಬಂದಿರುವ ಬಡತನದ ಕರಾಳ ಮುಖವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

23. ಮಾರಿದತ್ತನು ‘ಧೀರರಕಟ ಕುಮಾರರ್’ ಎಂದು ಉದ್ಗಾರವೆತ್ತಲು ಒದಗಿ ಬಂದ ಸಂದರ್ಭವನ್ನು ಪಾಠಭಾಗದ ಆಧಾರದಲ್ಲಿ ಬರೆಯಿರಿ.

24. ‘ಧರ್ಮೋ ಜಯತಿ ನಾಧರ್ಮಃ’ – ಈ ಮಾತನ್ನು ‘ವಟವೃಕ್ಷಮೇ ಸಾಕ್ಷಿ’ ಪಾಠಭಾಗದ ಆಧಾರದಲ್ಲಿ ಸ್ಪಷ್ಟಪಡಿಸಿರಿ.

25. ಬೆಂಕಿಯ ಕತ್ತಿಯ ಬಾಯಿಗೆ ಬಲಿಯಾಗಿ
ದೇಶವೆ ಹಾಳಾಯಿತೆಲ್ಲ
ತುಂಬು ಬಸಿರಿಯರು, ಹಾಲು ಮಕ್ಕಳು ಸತ್ತ
ಲೆಕ್ಕವ ದೇವರೆ ಬಲ್ಲ
– ‘ಬ್ಲೆನ್‌ಹೀಮ್ ಕದನ’ ಕವಿತೆಯಲ್ಲಿ ಬರುವ ಈ ಸಾಲುಗಳು ಯುದ್ಧದ ಭೀಕರತೆಯನ್ನು ಚಿತ್ರಿಸುತ್ತಿದೆ. ವಿಶ್ವಶಾಂತಿ ಕಾಯ್ದುಕೊಳ್ಳಬೇಕಾದರೆ ಶಾಂತಿ, ಸಾಮರಸ್ಯ ಮತ್ತು ವಿಶ್ವಾಸ ಅನಿವಾರ್ಯವಾಗಿದೆ ಎಂಬ ಆಶಯವನ್ನು ಪ್ರತಿಪಾದಿಸಿಕೊಂಡು ಲೇಖನವೊಂದನ್ನು ತಯಾರಿಸಿರಿ.

**(26 ರಿಂದ 28 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ 02 (ಎರಡು) ಪ್ರಶ್ನೆಗಳಿಗೆ ಒಂದೂವರೆ ಪುಟಗಳಿಗೆ ಕಡಿಮೆಯಾಗದಂತೆ ಉತ್ತರಿಸಿರಿ) $(2 \times 8 = 16)$**

26. ಅಂಡಮಾನಿನ ಕಡಲ ಜೀವಿಗಳ ವರ್ಣ ವೈವಿಧ್ಯತೆಯ ಕುರಿತು ಲೇಖಕರು ನಿರೂಪಿಸಿದ ಬಗೆಯನ್ನು ನಿಮ್ಮ ಮಾತುಗಳಲ್ಲಿ ವಿವರಿಸಿ ಬರೆಯಿರಿ.

27. ‘ನಿನ್ನಯ ವೀರರ್ವೈರ ನೋಯಿಸೆನು’ ಕಾವ್ಯಭಾಗದಲ್ಲಿ ಕರ್ಣನು ಮಾನಸಿಕ ತೊಳಲಾಟಕ್ಕೆ ಒಳಗಾಗುವ ಸನ್ನಿವೇಶವನ್ನು ವಿವರಿಸಿ ಬರೆಯಿರಿ.

28. “ರಾಜ ಮತ್ತು ಬಕರೊಳಗೆ ನಡೆದ ಒಪ್ಪಂದವು ಸಾಮಾನ್ಯ ಪ್ರಜೆಗಳಿಗೆ ‘ಗಾಯದ ಮೇಲೆ ಬರೆ’ ಎಳೆದಂತಾಯಿತು” – ಈ ಕುರಿತು ನಿಮ್ಮ ಅಭಿಪ್ರಾಯವನ್ನು ನಾಟಕದ ಆಧಾರದಲ್ಲಿ ಸಮರ್ಥಿಸಿ ಬರೆಯಿರಿ.

---